ಅಧ್ಯಕ್ಷರು.—ತಹಸೀಲ್ದಾರ್ ಅವರ ಕಛೇರಿಯಲ್ಲಿ ಒಬ್ಬರೇ ಸರ್ವೆಯರ್ ಫೋಡಿ ಕೆಲಸ ಮಾಡುವುದು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾವು ಒಂದು ಟಾರ್ಗೆಟ್ ಫಿಕ್ಸ್ ಮಾಡಿ ಪ್ರತಿ ತಿಂಗಳು ಫೋಡಿ ಕೇಸುಗಳು–೧೦, ಮ್ಯುಟೇಷನ್ಸ್ ಮತ್ತು ಆಲಿನಿಯೇಷನ್ಸ್ ೨೦ ಕೇಸುಗಳನ್ನು ಕ್ಲಿಯರ್ ಮಾಡ ಬೇಕು ಎಂದು ಹೇಳಿದ್ದೇವೆ. ಕೆಲವು ಕಡೆ ಅನೇಕ ವೇಕೆನ್ಸಿಗಳು ಇದ್ದು ಈ ಕೆಲಸ ತಡವಾಗಿದೆ. ಈಗಾಗಲೇ ನಾವು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಿ ಆದಷ್ಟು ಬೇಗ ರೆಕ್ರೂಟ್‌ಮೆಂಟ್ ಮಾಡಿ ಎಲ್ಲಾ ಕಡೆಗೂ ಈ ಕೆಲಸ ಜಾಗ್ರತೆಯಾಗಿ ಆಗುವಂತೆ ವ್ಯವಸ್ಥೆ ಮಾಡುತ್ತೇವೆ.

Janatha Housing Scheme in the State

263 SRI A. LAKSHMI SAGAR (Chickpet) & SRI S. R. BOMMAI (Hubli Rural).–Will the Minister for Housing and Urban Development be pleased to State.—

(*a*) The total number of houses built and allotted under Janatha housing scheme in the State of Karnataka–Figures may be furnished;

SRI DHARAM SINGH (Minister for Housing and Urban Development).—

(*a*) The total number of houses built and allotted under Janatha housing scheme is 2,82,578 from 1973 (the year of inception) to 31-12-81. The break up of the same is as noted below:

		No. of houses
1. Non-Hudco 1973-1980	...	1,07,010
2. Experimental Low Cost Housing Scheme 1976 to 31-12-81	...	48,644
3. Hudco assisted Peoples Housing Scheme 1978 to 31-12-81	...	1,22,714
4. Bank assisted Peoples Housing Scheme 1980 to 31-12-81	...	4,210
Total		2,82,578

ಶ್ರೀ ಎ. ಲಕ್ಷ್ಮೀಸಾಗರ್,—ತಾವು ನಾಲ್ಕು ವಿಧವಾದ ಯೋಜನೆಗಳ ಪ್ರಕಾರ ಸುಮಾರು ೨,೮೨,೫೭೮ ಮನೆಗಳನ್ನು ೩೧–೧೨–೮೧ರವರೆಗೆ ಕಟ್ಟಲಾಗಿದೆಯೆಂದು ಉತ್ತರದಲ್ಲಿ ತಿಳಿಸಿದ್ದೀರಿ. ತಾವು ಜಿಲ್ಲಾವಾರು ಜನತಾ ಮನೆಗಳ ಸಂಖ್ಯೆಯನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಧರ್ಮಸಿಂಗ್.—ಜಿಲ್ಲಾವಾರು ಅಂಕಿಗಳನ್ನು ನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಕಟ್ಟಿದಂಥ ಜನತಾ ಮನೆಗಳಲ್ಲಿ ಅನೇಕ ಮನೆಗಳು ಅರ್ಧ ಬಿದ್ದು, ಕೆಲವು ಪೂರ್ತಿಯಾಗಿ ಬಿದ್ದುಹೋಗಿವೆ ಮತ್ತು ಸರಿಯಾಗಿ ಕಟ್ಟಿಲ್ಲ ಎನ್ನುತಕ್ಕ ದೂರುಗಳು ಬಂದಿವೆ. ಆದಕಾರಣ ಇವುಗಳನ್ನು ದುರಸ್ತಿ ಮಾಡಲು ತಾವು ಯೋಜನೆಯನ್ನೇನಾದರೂ ಹಾಕಿ

ಕೊಂಡಿದ್ದೀರಾ? ಹಾಗಿದ್ದರೆ, ಈ ಯೋಜನೆಯ ಅಂಗವಾಗಿ ಎಷ್ಟು ಮನೆಗಳನ್ನು ದುರಸ್ತಿ ಮಾಡಿದ್ದೀರಿ ?

ಶ್ರೀ ಧರ್ಮಸಿಂಗ್.—ಈಗಾಗಲೇ ನಾವು ರಾಜ್ಯದಲ್ಲಿ ಒಟ್ಟು ೫,೨೫,೦೦೦ ಮನೆಗಳನ್ನು ಕಟ್ಟಬೇಕು ಎನ್ನುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ, ತಾವು ಪ್ರಶ್ನೆಯನ್ನು ಕೇಳಿದ ಕಾಲಕ್ಕೆ ನಾವು ೨,೮೭,೫೭೮ ಮನೆಗಳನ್ನು ಕಟ್ಟಿ ಅಲಾಟ್ ಮಾಡಿದ್ದೇವೆ. ಕಟ್ಟಿದಂಥ ಮನೆಗಳಲ್ಲಿ ಕೆಲವು ಕಡೆ ಮನೆಗಳು ಬಿದ್ದು ಹೋಗಿವೆ ಎನ್ನತಕ್ಕ ವರದಿ ಬಂದಾಗ ನಾವು ಆಗಲೇ ಯಾರ- ಯಾರ ಮನೆಗಳು ಬಿದ್ದು ಹೋಗಿವೆ ಅವುಗಳನ್ನು ರಿಪೇರಿ ಮಾಡಲಿಕ್ಕೆ ಡೈರೆಕ್ಷನ್ ಕೊಟ್ಟಿದ್ದೇವೆ. ನಾರ್ತ್ ಕೆನರಾ ಮತ್ತು ಹೆಚ್ಚಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಮನೆಗಳು ಬಿದ್ದು ಹೋಗಿದ್ದರೆ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಹದಿನೆಂಟು ಪರ್ಸೆಂಟ್ ಹಣವನ್ನು ಖರ್ಚು ಮಾಡುವಂತೆ ಇನ್‌ಸ್ಪೆಕ್ಷನ್ ಕೂಡ ಕೊಟ್ಟಿದ್ದೇವೆ. ೧೯೭೩ರಿಂದ ೭೯ರ ಡಿಸೆಂಬರ್‌ವರೆಗೆ, ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ೨,೭೫,೫೪೩ ಮನೆಗಳನ್ನು ಆಗ ಸ್ಯಾಂಕ್ಷನ್ ಮಾಡಿದ್ದರು. ಇದರಲ್ಲಿ ಕೇವಲ ೧,೫೮,೪೭ ಮನೆಗಳನ್ನು ಕಟ್ಟಿಸಿದ್ದರು. ನಾವು ಬಂದ ಮೇಲೆ ಇನ್‌ಕಂಪ್ಲೀಟ್ ಆದ ಮನೆಗಳನ್ನು ನಾವು ಕಂಪ್ಲೀಟ್ ಮಾಡಿದ್ದೇವೆ. ಹೋದ ವರ್ಷ ಹುಡ್ಕೋ ಸ್ಕೀಂನಿಂದ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ, ನಾನು ಮೊದಲೇ ಹೇಳಿದ ಹಾಗೆ ಈ ಬ್ಯಾಕ್‌ಲಾಗ್ ಏನು ಇತ್ತು ಅದನ್ನು ಸರಿಪಡಿಸುವುದಕ್ಕೆ ನಾವು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮತ್ತೆ ಬ್ಯಾಂಕುಗಳೊಂದಿಗೆ ನೆಗೋಷಿಯೇಟ್ ಮಾಡಿ ನಾಲ್ಕು ಪರ್ಸೆಂಟ್ ಬಡ್ಡಿಯಂತೆ ಹಣ ಪಡೆದುಕೊಂಡು ೫೦ ಸಾವಿರ ಮನೆಗಳನ್ನು ೮೦-೮೨ರಲ್ಲಿ ಮಾಡಿದ್ದೇವೆ. ೮೧-೮೨ರಲ್ಲಿ ಸುಮಾರು ೭೫ ಸಾವಿರ ಮನೆಗಳನ್ನು ಕಟ್ಟುವಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮಳೆ ಬಂದು ಬಿದ್ದ ಮನೆಗಳು ರಿಪೇರಿಯಾಗಬೇಕಾಗಿರುವ ಕಡೆ ರಿಪೇರಿ ಮಾಡುವಂತೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಪ್ರಶ್ನೆಯೇ ಇನ್‌ಕಂಪ್ಲೀಟ್ ಆಗಿ ಪ್ರಿಂಟ್ ಆಗಿದೆ.

ಅಧ್ಯಕ್ಷರು.—ಈ ಪ್ರಶ್ನೆ ಬಹಳ ಕಾಲ ತೆಗೆದುಕೊಳ್ಳುತ್ತದೆಂದು ಪ್ರಶ್ನೆಯ ಪೂರ್ಣ ಭಾಗವನ್ನು ಆಡ್ಮಿಟ್ ಮಾಡಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಪ್ರಶ್ನೆ ಕೇಳಿದ್ದುದು ಡಿಸೆಂಬರ್ ೮೧ರಲ್ಲಿ, ಉತ್ತರ ಬಂದಿರುವುದು ಈಗ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೆ ೮೦-೮೧, ೮೧-೮೨ ಈ ಎರಡೂವರೆ ವರ್ಷಗಳಲ್ಲಿ ಎಷ್ಟು ಹೊಸ ಮನೆಗಳನ್ನು ಕಟ್ಟಿದ್ದೀರಿ, ಜಿಲ್ಲಾವಾರು ಮಾಹಿತಿಯನ್ನು ಕೊಡಿ. ನನಗೆ ಗೊತ್ತಿರುವ ಹಾಗೆ ಹಳ್ಳಿಗಳಲ್ಲಿ ಮತ್ತು ಮುನಿಸಿಪಲ್ ಏರಿಯಾದಲ್ಲಿ ತಮ್ಮ ಸ್ಕೀಂ ಬರುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಮತ್ತು ಕಾರ್ಪೊರೇಷನ್ ಲಿಮಿಟ್ಸ್‌ನಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಯೋಜನೆ ಏನಾದರೂ ಮಾಡಿದ್ದೀರಾ ?

ಶ್ರೀ ಧರ್ಮಸಿಂಗ್.—ಈಗಾಗಲೇ ನಾನು ಹೇಳಿದ್ದೇನೆ, ೧೯೭೩ ರಿಂದ ೮೦ರವರೆಗೆ ಸ್ಯಾಂಕ್ಷನ್ ಆಗಿದ್ದ ಮನೆಗಳಲ್ಲಿ ನಾವು ೧,೫೮,೪೭೯ ಮನೆಗಳನ್ನು ಕಂಪ್ಲೀಟ್ ಮಾಡಿದ್ದೇವೆ. ೮೦-೮೧ರಲ್ಲಿ ಸುಮಾರು ೨೭ ಸಾವಿರ ಮನೆಗಳನ್ನು ರಿಲೀಸ್ ಮಾಡಿದ್ದೇವೆ. ಮತ್ತೆ ಮಾರ್ಚ್ ೮೨ರ ಹೊತ್ತಿಗೆ ನಾವು ೭೩ ಸಾವಿರ ಮನೆಗಳನ್ನು ಹೊಸದಾಗಿ ಕಟ್ಟಿದ್ದೇವೆ. ಮತ್ತೆ ಪ್ರತಿಯೊಂದು ಜನತಾ ಮನೆಗೂ ನಾಲ್ಕು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾವು ೧೯೮೨-೮೩ರಲ್ಲಿ ೧ ಲಕ್ಷ ೨ ಸಾವಿರ ಮನೆಗಳನ್ನು ಕಟ್ಟಿಸುವುದಕ್ಕೆ ನಿರ್ಧಾರ ತೆಗೆದುಕೊಂಡಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ೧೦೦೦ ಮನೆಗಳನ್ನು ಕಟ್ಟಿಸಬೇಕು ಮತ್ತು ಯಾವುದೇ ಊರಿನಲ್ಲಿ ೧೦ ಮನೆಗಳು ಇರಬೇಕು ಎಂದು ನಿರ್ದಿಷ್ಟ ಪಡಿಸಿದ್ದೇವೆ. ೧೯೭೮-೭೯ರಲ್ಲಿ ಈ ಹುಡ್ಕೋ ಆಸಿಸ್ಟೆನ್ಸ್‌ನಿಂದ ಪ್ರಾರಂಭವಾದ ಸ್ಕೀಂನಲ್ಲಿ ೫೦ ಸಾವಿರ ಮನೆಗಳನ್ನು ಈ ಎಕನಾವಿಂಕಲಿ ವೀಕರ್ ಸೆಕ್ಷನ್‌ಗೋಸ್ಕರ ಕಂಪ್ಲೀಟ್ ಮಾಡಿಕೊಟ್ಟಿದ್ದೇವೆ. ಮತ್ತು ನಾನ್ ಹುಡ್ಕೋ ಸ್ಕೀಮ್‌ನಲ್ಲಿ ೮೦ ಸಾವಿರ ಮನೆಗಳಲ್ಲಿ ನಾವು ೪೩,೨೫೨ ಮನೆಗಳನ್ನು ಕಂಪ್ಲೀಟ್ ಮಾಡಿದ್ದೇವೆ. ೧೯೭೯-೮೦ರಲ್ಲಿ ಪ್ರೀವಿಯಸ್ ಗೌರ್ನಮೆಂಟ್‌ನವರು ೮೪,೦೦೦ ಮನೆಗಳನ್ನು ಕಟ್ಟುವುದಕ್ಕೆ ಸ್ಯಾಂಕ್ಷನ್ ಮಾಡಿದ್ದರೆ ಅದರಲ್ಲಿ ೬೨೨೮ ಮನೆಗಳು ಕಂಪ್ಲೀಟ್ ಆಗಿವೆ, ಮತ್ತು ಈ ಬ್ಯಾಕ್‌ಲಾಗನ್ನು ಕಂಪ್ಲೀಟ್ ಮಾಡುವುದಕ್ಕೋಸ್ಕರ ಸಣ್ಣ ಸಣ್ಣ ತಾಲ್ಲೂಕು ಪ್ಲೇಸ್‌ನಲ್ಲಿ, ಮುನಿಸಿಪಲ್ ಏರಿಯಾಗಳಲ್ಲಿ ೧೯೮೦-೮೧ರಲ್ಲಿ ಸಂಪಾರು ೬೦೦೦ ಲೋಕಾಸ್ಟ್ ಹೌಸ್‌ಗಳನ್ನು ಹೋದ ವರ್ಷ ಕಟ್ಟಿದ್ದೇವೆ, ಈ ಜನತಾ ಮನೆಗಳನ್ನು ಕಟ್ಟಿಸತಕ್ಕಂಥ ರೀತಿಯಲ್ಲಿ ಕೂಡ ನಾವು ಕಡಿಮೆ ಮಾಡಿಲ್ಲ.

ಆ ಬಗ್ಗೆ ಕೂಡ ಡಿಸ್ಟ್ರಿಕ್ಟ್‌ವೈಸ್ ಫಿಗರ್ಸ್ ಕೂಡ ಇದೆ. ಅದರಲ್ಲಿ ೨೩೦೦ ಮನೆಗಳು ಬಿದ್ದುಹೋಗಿವೆ. ಅವುಗಳ ರಿಪೇರಿಗಾಗಿ ತಾಲ್ಲೂಕು ಬೋರ್ಡ್‌ನವರಿಗೆ ೧೮ ಪರ್ಸೆಂಟ್ ಅವರ್‌ಅಂಟ್‌ನಲ್ಲಿ ಹಣ ಕೂಟ್ಟು ಅವುಗಳನ್ನು ರಿಪೇರಿ ಮಾಡಬೇಕೆಂದು ಹೇಳಿ ನಾವು ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್.ಆರ್. ಬೊಮ್ಮಾಯಿ. — ಮಾನ್ಯ ಅಧ್ಯಕ್ಷರೇ ಈ ರಾಜ್ಯದಲ್ಲಿ ಮನೆಗಳೇ ಇಲ್ಲದಂತಹ ನಾಗರೀಕರ ಸಂಖ್ಯೆಯನ್ನು ಮಾನ್ಯ ಮಂತ್ರಿಯವರು ಐಡೆಂಟಿಫೈ ಮಾಡಿದ್ದಾರೆಯೇ? ಹಾಗಾದರೆ ಅದು ಎಷ್ಟು ? ಅದರಲ್ಲಿ ಹೌಸ್‌ಲೆಸ್ ಪೀಪಲ್ಸ್ ಎಷ್ಟು ? ಸೈಟ್‌ಲೆಸ್ ಪೀಪಲ್ಸ್ ಎಷ್ಟು ? ಅವರಿಗೆಲ್ಲಾ ಎಷ್ಟು ವರ್ಷದಲ್ಲಿ ಮನೆಗಳನ್ನು ಕಟ್ಟಿಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆ ? ಇವತ್ತು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈ ಬಗ್ಗೆ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆ, ಅದಕ್ಕೆ ಹಣವನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ನಾನು ಡೆಪ್ಯುಟಿ ಕಮೀಷನರ್ಸ್ ಜೊತೆಗೆ ಮಾತನಾಡಿದಾಗ ನಮಗೆ ಹಣ ಇಲ್ಲವಾಗಿದೆ ಎಂದು ಹೇಳಿದರು. ಈ ಹಣದ ವ್ಯವಸ್ಥೆಯನ್ನು ಯಾವಾಗ ಮಾಡುತ್ತಾರೆ ? ಈ ಬಗ್ಗೆ ಡಿಸ್ಟ್ರಿಕ್ಟ್‌ವೈಸ್ ಫಿಗರ್ಸ್ ಕೊಟ್ಟರೆ ವಿಷಯ ಗೊತ್ತಾಗುತ್ತದೆ. ಕೆಲವು ಕಡೆ ಲ್ಯಾಂಡ್ ಅಕ್ವಿಜಿಷನ್ ಕೆಲಸ ಆಗದೇ ಜನತಾ ಮನೆಗಳನ್ನು ಕಟ್ಟತಕ್ಕಂಥಾದ್ದು ನಿಂತುಹೋಗಿದೆ, ಕೆಲವು ಕಡೆ ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿರುವುದರಿಂದ ೫-೬ ವರ್ಷಗಳಿಂದ ಅವು ಹಾಗೆಯೇ ಉಳಿದಿವೆ. ಈ ಕೇಸ್‌ಗಳನ್ನು ಎಕ್ಸ್‌ಪಿಡೈಟ್ ಮಾಡಿ ಸ್ಟೇಯನ್ನು ವೆಕೇಟ್ ಮಾಡಿಸಿದರೆ ಮನೆಗಳನ್ನು ಕಟ್ಟಿಸುವುದಕ್ಕೆ ಅನುಕೂಲವಾಗುತ್ತದೆ. For four years we have not been able to complete a single house in the villages having more than 6000 population. ಇಂತಹ ಅನೇಕ ಹಳ್ಳಿಗಳು ಇವೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಕೇಳಂತ್ತೇನೆ ?

ಶ್ರೀ ಧರ್ಮಸಿಂಗ್.—ನಾನು ಈಗಾಗಲೇ ಹೇಳಿದಹಾಗೆ, ರಿಮೈನಿಂಗ್ ೧,೭೦,೦೦೦ ಮನೆಗಳನ್ನು ಕಟ್ಟಬೇಕೆಂದಿದ್ದರೂ ಅದಕ್ಕೆ ಹುಡ್ಕೋದಿಂದ ಹಣ ಬಂದಿಲ್ಲ. ಸರ್ಕಾರದ ಕಾಂಟಿಜಿನ್ಸಿ ಫಂಡ್‌ನಿಂದ ಅದಕ್ಕೆ ಹಣ ಕೊಟ್ಟು ನಾವು ಅದನ್ನು ಕಂಪ್ಲೀಟ್ ಮಾಡಿದ್ದೇವೆ. ೧೯೮೧-೮೨ರಲ್ಲಿ ಹೌಸಸ್‌ಗಾಗಿ ನಾವು ಈಗಾಗಲೇ ಫುಲ್ ಅಮೌಂಟ್ ರಿಲೀಸ್ ಮಾಡಿದ್ದೇವೆ. ೧ ಲಕ್ಷ ೨ ಸಾವಿರ ಮನೆಗಳು ಒಂದುಕಡೆ ಮತ್ತು ೭೩ ಸಾವಿರ ಮನೆಗಳು ಸೇರಿ ಒಟ್ಟು ೧ ಲಕ್ಷ ೭೫ ಸಾವಿರ ಮನೆಗಳನ್ನು ಕಟ್ಟುವುದಕ್ಕೆ ೭೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗಾಗಲೇ ೧೫ ಕೋಟಿ ಬಜೆಟ್ ಪ್ರಾವಿಷನ್ ಇದೆ. ಈ ಬಗ್ಗೆ ನಾನು ಫೈನಾನ್ಸ್ ಮಿನಿಸ್ಟರ್ ಜೊತೆಯಲ್ಲಿ ಮಾತನಾಡಿದ್ದೇನೆ. ಅದಕ್ಕೆ ಹೆಚ್ಚಿನ ಆಧ್ಯತೆಯನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ೧೦೦೦ ಮನೆಗಳನ್ನು ಕಟ್ಟಬೇಕು. ಅದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಅಪ್ರೂವಲ್ ಸಿಕ್ಕಿದೆ. ಮಾನ್ಯ ಸದಸ್ಯರು ಹೈಕೋರ್ಟ್‌ನಲ್ಲಿರತಕ್ಕಂಥ ಪೆಂಡಿಂಗ್ ಕೇಸಸ್ ಬಗ್ಗೆ ಕೇಳಿದರು. ೧೨೨೯ ಕೇಸ್‌ಗಳು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಈ ಬಗ್ಗೆ ನಾವು ವಕೀಲರನ್ನೂ ಕೂಡ ನೇಮಕ ಮಾಡುತ್ತಿದ್ದೇವೆ. ಈಗಾಗಲೇ ನಾವು ಐಡೆಂಟಿಫೈ ಮಾಡಿದಂತೆ ೧೧ ಲಕ್ಷ ಸೈಟ್‌ಲೆಸ್ ಪೀಪಲ್ಸ್ ಇದ್ದಾರೆ. ಅದರಲ್ಲಿ ೯ ಲಕ್ಷ ಜನರಿಗೆ ಸೈಟುಗಳನ್ನು ಕೊಟ್ಟಿದ್ದೇವೆ. ಇನ್ನು ೨ ಲಕ್ಷ ಜನರಿಗೆ ಸೈಟು ಕೊಡಬೇಕಾಗಿದೆ. ೧೯೮೨-೮೩ಕ್ಕೆ ಎಲ್ಲರಿಗೂ ಸೈಟ್ ಕೊಡಬೇಕೆಂದು ಹೇಳಿ ನಾವು ಈ ಕೆಲಸವನ್ನು ಸ್ಪೀಡ್‌ಅಪ್ ಮಾಡುತಿ ದ್ದೇವೆ. ಈ ಬಗ್ಗೆ ಒಂದು ಸ್ಪೆಷಲ್ ಸೆಲ್ ಮಾಡಬೇಕೆಂದಿದ್ದೇವೆ. ಅದಕ್ಕೆ ಜೂನಿಯರ್ ಇಂಜಿನಿಯರ್ಸ್‌ನ್ನು ಕೊಟ್ಟು ಮನೆಗಳನ್ನು ಕಟ್ಟಬೇಕೆಂದಿದ್ದೇವೆ. ಈ ಬಗ್ಗೆ ರವಿನ್ರೂ ಮಿನಿಸ್ಟರ್ ಹತ್ತಿರ ಕೂಡ ನಾನು ಮಾತ ನಾಡಿದ್ದೇನೆ. ಒಟ್ಟಿನಲ್ಲಿ ನಾನು ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಈಗಾಗಲೇ ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಬೇಕೆಂದು ಹೇಳಿ ಒಂದು ಸರ್ಕಾರಿ ಆಜ್ಞೆ ಕೂಡ ಬಂದಿದೆ. ಆದರೆ ಅದಕ್ಕೆ ಹಣದ ವ್ಯವಸ್ಥೆ ಆಗಿಲ್ಲ. ೭೦ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಬಜೆಟ್ ಪ್ರಾವಿಷನ್ ೧೫ ಕೋಟಿ ಇದೆ ಎಂದು ಹೇಳಿದ್ದಾರೆ. ಇದರಿಂದ ಜನಕ್ಕೆ ಒಂದು ಆಸೆ ಹುಟ್ಟಿಸಿದಂತಾಗು ತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ೧೦೦೦ ಮನೆಗಳನ್ನು ಕಟ್ಟುವುದಕ್ಕೆ ಯಾವಾಗ ಪೂರ್ತ ಹಣವನ್ನು ಒದಗಿಸುತ್ತಾರೆ ? ಎಷ್ಟು ಸಮಯದಲ್ಲಿ ಅದನ್ನು ಒದಗಿಸುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಧರ್ಮಸಿಂಗ್.—ನಾವು ಈ ಬಗ್ಗೆ ಲ್ಯಾಂಡ್ ಐಡೆಂಟಿಫಿಕೇಷನ್ ಮಾಡಬೇಕಂ· ಈ ಬಗ್ಗೆ ಬೆನಿಫಿಷರೀಸ್ ಕೂಡ ಮುಂದೆ ಬರಬೇಕಾಗಿದೆ, ನಾವು ಈಗಾಗಲೇ ಹಣವನ್ನು ಪ್ರೊವೈಡ್ ಮಾಡುತ್ತಿದ್ದೇವೆ. ಐದೈದು ಜನ ಜ್ಯೂನಿಯರ್ ಇಂಜಿನಿಯರ್ಸ್‌ನ್ನು ಕೂಡ ಕೊಟ್ಟಿದ್ದೇವೆ. ಎಗ್ಸಿಸ್ಟಿಂಗ್ ವೇಕೆನ್ಸಿಯಲ್ಲಿ ಕೂಡ ಅವರಿಗೆ ಕೆಲಸ ಕೊಡುತ್ತಿದ್ದೇವೆ.

ಶ್ರೀ ವಿ.ಎಲ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏನಾಗುತ್ತಿದೆ ಎಂದರೆ, ನಿವೇಶನ ಇಲ್ಲದವರಿಗೆ ನಿವೇಶನ ಕೊಡುತ್ತೇವೆಂದು ಹೇಳಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ. ಆಮೇಲೆ ಅದನ್ನು ಅವರಿಗೆ ಕೊಡದೆ ಅದನ್ನು ಹಾಗೆಯೇ ಇಟ್ಟುಕೊಂಡು ವಿದ್ಯಾ ಇಲಾಖೆಯಿಂದ ಸ್ಕೂಲ್ ಕಟ್ಟಡ ಕಟ್ಟಿಸುವುದಕ್ಕೆ ಮತ್ತು ಬೇರೆ ಬೇರೆ ಉದ್ದೇಶಗಳಿಗೆ ನಿವೇಶನ ಕೊಡತಕ್ಕಂಥಾದ್ದು ನಡೆದಿದೆ, ಅನೇಕ ಹಳ್ಳಿಗಳಲ್ಲಿ ಈ ರೀತಿ ಆಗಿದೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಭೂ ಸ್ವಾಧೀನಪಡಿಸಿಕೊಂಡಮೇಲೆ, ಹಣವನ್ನು ಸರ್ಕಾರದವರು ಸಕಾಲದಲ್ಲಿ ಒದಗಿಸದೇ ಇರುವುದರಿಂದ ಕಾಂಪನ್‌ಸೇಷನ್ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ, ಮತ್ತು ಅದರ ಮೇಲೆ ಇಂಟರೆಸ್ಟ್ ಕೂಡ ಜಾಸ್ತಿಯಾಗುತ್ತಿದೆ. ಆದ್ದರಿಂದ ಸರ್ಕಾರದವರು ಈ ಇಂಟರೆಸ್ಟ್‌ನ್ನು ಕೊಡತಕ್ಕಂಥಾದ್ದನ್ನು ತಪ್ಪಿಸುವುದಕ್ಕೆ ಮತ್ತು ಸಕಾಲದಲ್ಲಿ ಪರಿಹಾರವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಧರ್ಮಸಿಂಗ್.—ಸ್ವಾಮಿ, ಮಾನ್ಯ ಸದಸ್ಯರು ಜನತಾ ಮನೆಗಳನ್ನು ಕಟ್ಟಿಸತಕ್ಕಂಥ ನಿವೇಶನದಲ್ಲಿ ಬೇರೆ ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದಾರೆ ಎಂದು ಏನು ಹೇಳಿದ್ದಾರೆ ಅದು ನಮ್ಮ ಗಮನಕ್ಕೆ ಬಂದಿಲ್ಲ. ನಾವು ಈಗ ಜನತಾ ಮನೆಗಳನ್ನು ಕಟ್ಟಿಸತಕ್ಕಂಥಾದ್ದಕ್ಕೆ ಹೆಚ್ಚಿನ ಗಮನಕೊಟ್ಟಿದ್ದೇವೆ. ನಾವು ಭೂ ಸ್ವಾಧೀನ ಮಾಡಿಕೊಂಡಮೇಲೆ ಕಾಂಪನ್‌ಸೇಷನ್ ಕೂಡ ಕೊಡುತ್ತಿದ್ದೇವೆ. ಹೋದ ಸಾರಿ ನಾವು ೬೫ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಸ್ಪೆಂಟ್ ಮಾಡಿದ್ದೇವೆ. ಈ ಸಲ ೪೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದಕ್ಕಾಗಿ ನಾವು ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ.

ಶ್ರೀ ವಿ.ಎಲ್. ಶಿವಪ್ಪ.—ಸ್ವಾಮಿ, ಈ ಭೂ ಸ್ವಾಧೀನ ಕಾನೂನಿನ ಪ್ರಕಾರ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿರುವುದು ನಿವೇಶನ ಇಲ್ಲದವರಿಗೆ ಕೊಡುವುದಕ್ಕೆ ಮಾತ್ರ. ಅದನ್ನು ಬೇರೆ ಉದ್ದೇಶಕ್ಕೆ ಕೊಡುವುದಕ್ಕಲ್ಲ. ಆದರೂ ಬೇರೆ ಬೇರೆ ಇಲಾಖೆಯವರು ಬಂದು ಕೇಳಿದರು ಎಂದು ಹೇಳಿ ಬೇರೆ ಬೇರೆ ಉದ್ದೇಶಕ್ಕೆ ಕೊಟ್ಟುಬಿಟ್ಟಿದ್ದಾರೆ. ಈ ರೀತಿ ನನ್ನ ಕ್ಷೇತ್ರದಲ್ಲೇ ಆಗಿದೆ, This cannot be diverted from the purpose for which it was acquired.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಮಂತ್ರಿಯವರಿಗೆ ನೀವು ಪತ್ರ ಬರೆದು ತಿಳಿಸಿ.

SRI V.L. SHIVAPPA.—Sir, it is a general policy. The circulars have to be issued. There are several High court decisions. It cannot be given away for other purpose.

ಅಧ್ಯಕ್ಷರು.—ಮನೆ ಕಟ್ಟುವುದಕ್ಕೆ ಆಕ್ವೈರ್ ಆಗಿರತಕ್ಕಂಥ ನಿವೇಶನ ಬೇರೆ ಉದ್ದೇಶಕ್ಕೆ ಉಪಯೋಗವಾಗಿರತಕ್ಕಂಥ ಉದಾಹರಣೆ ನನ್ನ ಗಮನಕ್ಕೆ ಬಂದಿಲ್ಲ ಎಂದೂ ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಅದು ನಿಮ್ಮ ಗಮನಕ್ಕೆ ಬಂದಿದ್ದರೆ ನೀವು ಅದನ್ನು ಅವರಿಗೆ ಪತ್ರ ಬರೆದು ತಿಳಿಸಿ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಶ್ರೀ ಬೊಮ್ಮಾಯಿಯವರು ಕೇಳಿದ ಪ್ರಶ್ನೆಯನ್ನೇ ಕೇಳುತ್ತಿದ್ದೇನೆ, ಏಕೆಂದರೆ ಅವರು ಆಗಲೇ ಕೇಳಿದ ಪ್ರಶ್ನೆಗೆ ಮಾನ್ಯ ಹಣಂಶ್ರಿಯವರಿಂದ ಉತ್ತರ ಬರಲಿಲ್ಲ. ನಮ್ಮ ರಾಜ್ಯದಲ್ಲಿ ಅವರು ಸರ್ವೆ ಮಾಡಿದ್ದರಲ್ಲಿ ಎಷ್ಟು ಜನ ಸೈಟ್‌ಲೆಸ್ ಮಂತ್ತು ಎಷ್ಟು ಜನ ಹೌಸ್‌ಲೆಸ್ ಇದ್ದಾರೆ ? ಈಗ ರಾಜ್ಯದಲ್ಲಿ ೨ ಲಕ್ಷ ೮೦ ಸಾವಿರ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಈಗ ಏನು ಮನೆಗಳನ್ನು ಕೊಟ್ಟಿದ್ದಾರೆ ಅದರಷ್ಟೇ ರಿಕ್ವೆರ್‌ಮೆಂಟ್ ಇತ್ತೇ ? ಅಥವಾ ಇದರಲ್ಲಿ ರಿಕ್ವೈರ್‌ಮೆಂಟ್ ಎಷ್ಟು ಇತ್ತು ? ರಾಜ್ಯದ ಎಲ್ಲಾ ಜನಗಳಿಗೆ ಮನೆಗಳನ್ನು ಒದಗಿಸತಕ್ಕಂಥ ಈ ಯೋಜನೆಯನ್ನು ಯಾವ ಇಸವಿಯಲ್ಲಿ ಮುಗಿಸಬೇಕೆಂದು ಯೋಜನೆ ಮಾಡಿದ್ದಾರೆ? ಎಷ್ಟು ಜನರಿಗೆ ಈ ರೀತಿ ಮನೆಗಳನ್ನು ಕೊಡಬೇಕೆಂದು ಅವರ ಸರ್ವೆಯಿಂದ ತಿಳಿದುಬಂದಿದೆ ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಮನೆ ಮತ್ತು ನಿವೇಶನ ಇಲ್ಲದ ೧೧.೩೮ ಲಕ್ಷ ಜನರನ್ನು ಸರ್ಕಾರದವರು ಗುರುತಿಸಿದ್ದೇವೆ. ಮನೆಗಳನ್ನು ಕಟ್ಟಿಸಿ

ಕೊಡಬೇಕೆಂದು ಅನೇಕ ಜನರಿಂದ ಬೇಡಿಕೆಗಳು ಬಂದಿವೆ. ಆದರೆ ಮನೆಗಳನ್ನು ನಿರ್ಮಾಣ ಮಾಡಿಕೊಡ ಬೇಕಾದರೆ ಸರ್ಕಾರದಲ್ಲಿ ಹಣದ ಕೊರತೆ ಇದೆ ಆದ್ದರಿಂದ ಹಂತ ಹಂತವಾಗಿ ಮನೆಗಳನ್ನು ಕಟ್ಟಿ ಕೊಡಲು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗಾಗಲೇ ಸುಮಾರು ೩–೪ ಸಾವಿರ ಮನೆಗಳನ್ನು ಸರ್ಕಾರದವರು ಕಟ್ಟಿಸಿಕೊಟ್ಟಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ನಾವು ಸುಮಾರು ೧೦೦ ಮನೆಗಳನ್ನು ಕಟ್ಟಿಕೊಡಬೇಕಾದರೆ ಸುಮಾರು ೭೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಹಣದ ಕೊರತೆ ಇರುವುದರಿಂದ ಎಲ್ಲಾ ಕಡೆಗಳಲ್ಲಿ ಕೆಲಸ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ಎ, ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಒಟ್ಟು ಸಂಖ್ಯೆಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಕೊಟ್ಟಿರುವ ಮನೆಗಳ ಜಿಲ್ಲಾವಾರು ಅಂಕಿ ಅಂಶಗಳನ್ನು ತಿಳಿಸಂತ್ತೀರಾ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಜಿಲ್ಲಾವಾರು ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ಹರಿಜನ ಮಂತ್ತು ಗಿರಿಜನರಿಗೆ ಒಟ್ಟು ೩೮ ಪರ್ಸೆಂಟ್ ಮನೆಗಳ ಸೈಟ್‌ಗಳನ್ನು ಕೊಟ್ಟಿದ್ದೇವೆ.

Uddur Aspathre Kaval Co-operative Society, Hunsur Taluk

485 DR. H. L. THIMME GOWDA (Basavanagudi)—Will the Minister for Co-operation be pleased to state.—

(a) the total number of members of the Uddur Aspathre Kaval Co-operative Farming Society, Hunsur Taluk ;

(b) the total number of persons cultivating the lands of the society and how many of them are members of the society and how many are non-members ;

(c) whether it is not a fact that due to allowing non-members to cultivate the lands by the Management of the Society has lead to unrest amongst the members of the Society ;

(d) the action taken by Government against the office bearers of the Society for having allowed such lapses to occur?

SRI H. C. SRIKANTAIAH (Minister for Co-operation)—

(a) 997.

(b) Total No. of persons cultivating the lands of the Society. ... 1691

Members ... 997

Non-Members ... 694

(c) Yes.

(d) The Committee of Management of the Society has been superseded and an Administrator has been appointed to manage the affairs of the Society.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನ (ಇ) ಪ್ರಶ್ನೆಗೆ ಕನ್ನಡದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಇಂಗ್ಲೀಷ್‌ನಲ್ಲಿ ಉತ್ತರ ಕೊಡುವಾಗ ''ಹೌದು'' ಎಂದು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಯಾವ ಉತ್ತರ ಸರಿಯಾಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.